**<u>ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೇ ನ್ಯಾಯಿಕ ದಂಡಾಧಿಕಾಗಳ ನ್ಯಾಯಾಲಯ, ಯಾದಗಿರಿ</u>**

**<u>ಸಿ.ಸಿ. ನಂ.1057/2025</u>**

ಫಿರ್ಯಾದುದಾರರು:     ಶ್ರೀ ಅರುಣ್ ಕಿರಣಗಿ ತಂದೆ ಶಿವಶರಣಪ್ಪ ಕಿರಣಗಿ,

<u>ವಿರುದ್ಧ</u>

ಆಪಾದಿತ:     ಶ್ರೀ ಪೃಥ್ವಿರಾಜ್ ಮನಸ್ಗಲ ತಂದೆ ವೀರನಗೌಡ ಮನಸ್ಗಲ,

<u>ಆಪಾದನೆ</u>

ಶ್ರೀ ಅರುಣ ಚೌಗುಲೆ ಬಿ.ಎ.,ಎಲ್.ಎಲ್.ಬಿ.,**(Honors)** ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಯಾದಗಿರಿ ಆದ ನಾನು ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಕೆಳಕಂಡಂತೆ ದೋಷರೋಪಣೆಯನ್ನು ಹೊರಿಸುತ್ತಿದ್ದೇನೆ.

ಆರೋಪಿಯಾದ ನೀವು ನಿಮಗೆ ಮತ್ತು ನಿಮ್ಮ ಕುಟುಂಬದವರಿಗೆ ಸೇರಿದ ಯಾದಗಿರಿ ಕೆ ಗ್ರಾಮದ ಸರ್ವೇ ನಂ **52, 183, 187** ಮತ್ತು **188** ರ ಜಮೀನಿನಲ್ಲಿ ಅನಮೂಲ್ ಕಾಲೋನಿ ಎಂಬ ಹೆಸರಿನಡಿಯಲ್ಲಿ ಯೋಜನೆ ರೂಪಿಸಿ ತಲಾ **30 X 40** ಅಡಿಯ ನಿವೇಶನಗಳನ್ನು ನಿರ್ಮಿಸಿ ಆ ಪೈಕಿ **1** ನಿವೇಶನವನ್ನು ದೂರುದಾರರಿಗೆ ರೂ**.5,00,000/-** ಮೊತ್ತಕ್ಕೆ ಮಾರಾಟ ಮಾಡುವುದಾಗಿ ತಿಳಿಸಿ ಅವರಿಂದ ದಿನಾಂಕ **01.08.2018** ರಿಂದ **01.09.2022** ರ ಅವಧಿಯಲ್ಲಿ ತಿಂಗಳಿಗೆ ರೂ**.10,000/-** ದಂತೆ **50** ಕಂತುಗಳಲ್ಲಿ ರೂ**.5,00,000/-** ಹಣ ಪಡೆದುಕೊಂಡಿರುತ್ತೀರಿ. ನಂತರ ನೀವು ದೂರುದಾರರಿಗೆ ನಿವೇಶನ ಮಾರಾಟ ಮಾಡದೆ ಅವರಿಂದ ಪಡೆದ ಹಣವನ್ನು ಮರುಪಾವತಿ ಮಾಡುವ ಸಲುವಾಗಿ ಆಪಾದಿತನಾದ ನೀವು ಖಾತೆ ಹೊಂದಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಎ.ಡಿ.ಬಿ ಶಾಖೆ, ಸ್ಟೇಷನ್ ರೋಡ್, ಯಾದಗಿರಿ ಗೆ ಸೇರಿದ **971570** ಸಂಖ್ಯೆಯ ಚೆಕ್ ನಲ್ಲಿ ರೂ. **5,00,000/-** ಹಾಗೂ ದಿನಾಂಕ **16.05.2025** ಎಂದು ನಮೂದು ಮಾಡಿ ಬ್ಯಾಂಕಿಗೆ ಹಾಜರುಪಡಿಸಿ ನಗದೀಕರಿಸಿಕೊಳ್ಳುವಂತೆ ನೀಡಿದ್ದೀರಿ. ಸದರಿ ಚೆಕ್‌ನ್ನು ಪಿರ್ಯಾದುದಾರರು ನಗದೀರಣಕ್ಕಾಗಿ ತಾವು ಖಾತೆ ಹೊಂದಿರುವ ಕರ್ನಾಟಕ ಗ್ರಾಮೀಣ ಬ್ಯಾಂಕ್, ಯಾದಗಿರಿ ಶಾಖೆಯ ಮೂಲಕ ದಿನಾಂಕ **16.05.2025** ರಂದು

ಹಾಜರು ಪಡಿಸಿದಾಗ, “Funds Insufficient” ಎಂಬ ಹಿಂಬರಹದೊಂದಿಗೆ ಅಮಾನ್ಯಗೊಂಡು ಚೆಕ್ಕನ್ನು ದಿನಾಂಕ **17.05.2025** ರಂದು ವಾಪಸ್ಸು ನೀಡಿರುತ್ತಾರೆ. ನಂತರ ಪಿರ್ಯಾದುದಾರರು ತಮ್ಮ ವಕೀಲರ ಮೂಲಕ ದಿನಾಂಕ **02.06.2025** ರಂದು ಅಪಾದಿತನಾದ ನಿಮ್ಮ ವಿಳಾಸಕ್ಕೆ ನೊಂದಾಯಿತ ಅಂಚೆಯ ಮೂಲಕ ತಿಳುವಳಿಕೆ ಪತ್ರವನ್ನು ಕಳುಹಿಸಿದ್ದು, ಸದರಿ ನೋಟಿಸ್ ನಿಮಗೆ ದಿನಾಂಕ **11.06.2025** ರಂದು ಜಾರಿಯಾಗಿರುತ್ತದೆ. ಆಪಾದಿತನಾದ ನೀವು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದಿದ್ದರು ದೂರುದಾರರಿಗೆ ಚೆಕ್‌ನ್ನು ನೀಡಿ ನಂತರ ಚೆಕ್ ಮೊತ್ತವನ್ನು ಪಾವತಿ ಮಾಡದೆ ಇರುವುದರ ಮೂಲಕ ವರ್ಗಾವಣೀಯ ಲಿಖಿತ ಕಾಯ್ದೆ ಕಲಂ **138** ರ ರಿತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಾ ಎಂದು ಆಪಾದಿಸಲಾಗಿದೆ.

ಪ್ರಶ್ನೆ- 1 : ನಿಮ್ಮ ಮೇಲೆ ಹೊರಿಸಲಾಗಿರುವ ಆಪಾದನೆಯನ್ನು

ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ :

ಪ್ರಶ್ನೆ-2 : ನೀವು ಸದರೀ ಆಪಾದನೆಯನ್ನು ಒಪ್ಪಿಕೊಳ್ಳುವಿರಾ? ಅಥವಾ

ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೆ ?

ಉತ್ತರ :

**(**ಮೇಲ್ಕಂಡಂತೆ ಆಪಾದನೆಯನ್ನು ಆಪಾದಿತನಿಗೆ ತಿಳಿದ ಭಾಷೆಯಲ್ಲಿ ಓದಿ**,** ತಿಳಿಸಿ ಹೇಳಿ ಅವರು ನೀಡಿದ ಉತ್ತರಗಳನ್ನು ಬರೆದುಕೊಂಡಿರುವುದಾಗಿ ದೃಢೀಕರಿಸಲಾಗಿದೆ**.)**

ದಿನಾಂಕಃ 29.11.2025.
ಸ್ಥಳಃ ಯಾದಗಿರ

ಪ್ರಧಾನ ದಿವಾಣಿ ನ್ಯಾಯಾಧಿಶರು
ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,
ಯಾದಗಿರಿ.